3. ಪ್ರಕಟಣೆ

ವಿಷಯ:– ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ವಿರೋಧ ಪಕ್ಷದ ನಾಯಕರೆಂದು ಪರಿಗಣಿಸಿರುವ ಬಗ್ಗೆ

ಅಧ್ಯಕ್ಷರು:– ಭಾರತೀಯ ಜನತಾ ಪಕ್ಷದ ರಾಜ್ಯ ಅಧ್ಯಕ್ಷರಾದ ಶ್ರೀ ಅನಂತಕುಮಾರ್ ಅವರು ದಿನಾಂಕ 9ನೇ ಜೂನ್ 2004 ರಂದು ವಿಧಾನ ಸಭಾಧ್ಯಕ್ಷರಿಗೆ ಪತ್ರವಮ್ನು ನೀಡಿರುವ ಮೂಲಕ ಕರ್ನಾಟಕ ವಿಧಾನಸಭೆಯಲ್ಲಿ ಭಾರತೀಯ ಜನತಾ ಪಕ್ಷವು ಹೆಚ್ಚಿನ ಸದಸ್ಯರುಗಳುಳ್ಳ ಎರಡನೇ ದೊಡ್ಡ ಪಕ್ಷವಾಗಿದ್ದು ಹಾಗೂ ಸದರಿ ಪಕ್ಷವು ವಿಧಾನ ಸಭೆಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ ರವರನ್ನು ಆ ಪಕ್ಷದ ನಾಯಕರನ್ನಾಗಿ ಚುನಾಯಿಸಿದ್ದು, ಶ್ರೀ ಬಿ.ಎಸ್. ಯಡಿಯೂರಪ್ಪ ರವರನ್ನು ವಿರೋಧ ಪಕ್ಷದ ನಾಯಕರೆಂದು ಪರಿಗಣಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಭಾರತೀಯ ಜನತಾ ಪಕ್ಷವು ವಿರೋಧ ಪಕ್ಷದಲ್ಲಿ 79 ಸದಸ್ಯರುಗಳನ್ನು ಹೊಂದಿರುವ ಅತಿ ದೊಡ್ಡ ಪಕ್ಷವಾಗಿರುವ ಕಾರಣ ಹಾಗೂ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ಅರ್ಥ ವಿವರಣೆ ನಿಯಮ 2(2)ರಲ್ಲಿ ಹೇಳಿರುವ ರೀತ್ಯಾ ಎಲ್ಲಾ ಅಂಶಗಳನ್ನು ಪರಿಗಣಿಸಿದ್ದು, ಶ್ರೀ ಬಿ.ಎಸ್. ಯಡಿಯೂರಪ್ಪ ಅವರನ್ನು ವಿರೋಧ ಪಕ್ಷದ ನಾಯಕರೆಂದು ಇಂದಿನಿಂದ ಜಾರಿಗೆ ಬರುವಂತೆ ಮನ್ನಣೆ ನೀಡುತ್ತಿದ್ದೇನೆ.

ಈಗ ಸದನವನ್ನು ನಾಳೆ ಮಧ್ಯಾಹ್ನ 12.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 18 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 11–6–04ರ ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ ಸೇರಲು ನಿಶ್ಚಯಿಸಿತು).

(+ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)